ದೀಪದ ವ್ಯವಸ್ಥೆ; ಕೇಬಲ್ ಕಾರು, ಹೀಗೆ ಸೌಕರ್ಯ, ಐಶಾರಾಮಿ ಜೀವನಕ್ಕಾಗಿ ಘಟ್ಟಕ್ಕೆ ಕೊಡಲಿಯಿಡುವ ಹುನ್ನಾರವಿದೆ. 2020ರ ಮಳೆಗಾಲದಲ್ಲಿ ಜೋಗದ ಬ್ರಿಟೀಷ್ ಬಂಗಲೆಯ ಹಿಂಭಾಗದಲ್ಲಿ ಗುಡ್ಡ ಕುಸಿದಿದ್ದು; ಈ ಯೋಜನೆಗಳು ಜಾರಿಯಾದಲ್ಲಿ ಮೂಲ ಜಲಪಾತವೇ ಕುಸಿದು ಬೀಳುವ ಅಪಾಯವಿದೆ. ಆಗುಂಬೆ ಮತ್ತು ಸೋಮೇಶ್ವರ ವನ್ಯಜೀವಿ ಅಭಯಾರಣ್ಯ ಹಾದು ಹೋಗುವ ತೀರ್ಥಹಳ್ಳಿ–ಮಲ್ಪೆ 2 ಪಥಗಳ ರಾಷ್ಟ್ರೀಯ ಹೆದ್ದಾರಿ (NH169A) ಅಗಲೀಕರಣವಾಗುವ ಸಂದರ್ಭ ಲಕ್ಷಾಂತರ ಮರಗಳು ಸೋಮೇಶ್ವರ ವನ್ಯಜೀವಿ ಅಭಯಾರಣ್ಯದಲ್ಲಿ ನಾಶವಾಗಲಿವೆ. ಶಿವಮೊಗ್ಗ–ತೀರ್ಥಹಳ್ಳಿ–ಶೃಂಗೇರಿ–ಕಾರ್ಕಳ–ಮಂಗಳೂರು ರಾಷ್ಟ್ರೀಯ ಹೆದ್ದಾರಿ (NH169) ಅಗಲೀಕರಣ ಮಾಡಿದರೆ ಶೆಟ್ಟಿಹಳ್ಳಿ ವನ್ಯಜೀವಿ ಅಭಯಾರಣ್ಯ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ಲಕ್ಷಾಂತರ ಮರಗಳು ನಾಶವಾಗಲಿವೆ. ಬೆಂಗಳೂರು –ಮಂಗಳೂರು ಹೆದ್ದಾರಿ (NH75) ಅಗಲೀಕರಣ ಕಾಮಗಾರಿಗೂ ಲಕ್ಷಾಂತರ ಮರಗಳು ಬಲಿಯಾಗುತ್ತಿವೆ.

ಉತ್ತರಕನ್ನಡ ಸಮುದ್ರ ದಂಡೆಯಲ್ಲಿ ಹೊಸದಾಗಿ ರೂಪುಗೊಳ್ಳುವ ಬಂದರುಗಳಿಂದ ಸರಕು ಸಾಗಾಣಿಕೆಗೆ ಬೇಕಾಗಿ ಇಷ್ಟೆಲ್ಲ ರಸ್ತೆಗಳನ್ನು ಭಾರೀ ಪ್ರಮಾಣದಲ್ಲಿ ನಿರ್ಮಿಸಲಾಗುತ್ತಿದೆಯೇ ಹೊರತು ಜನರ ಓಡಾಟಕ್ಕಾಗಿ ಅಲ್ಲ. ಜನರ ಓಡಾಟಕ್ಕೆ ರಸ್ತೆಗಳ ಅನುಕೂಲ ಈಗಾಗಲೇ ಇದೆ. ಸರಕು ಸಾಗಾಣಿಕೆಯ ಭಾರೀ ವಾಹನಗಳಿಗಾಗಿ ರಸ್ತೆಯನ್ನು ಅಗಲಗೊಳಿಸಲಾಗುತ್ತಿದೆ. ಅಂತಿಮವಾಗಿ ಪಶ್ಚಿಮ ಘಟ್ಟದಲ್ಲಿ ಜಾರಿಯಾಗುವ ಯೋಜನೆಗಳೆಲ್ಲವೂ ಎಲ್ಲಿಯೋ ಕುಳಿತ ಉದ್ಯಮಿಗಳಿಗೆ ಪೂರಕವಾಗುವಂತೆಯೇ ಇರುತ್ತವೆ. ಆದ್ದರಿಂದ ಮರಗಳ ನಾಶಕ್ಕೆ ಅನುಮತಿಯನ್ನು ಪಡೆಯುವ ಅಥವಾ ಸಾರ್ವಜನಿಕ ಅಹವಾಲು ಸ್ವೀಕರಿಸುವ ಗೋಜಿಗೇ ಹೋಗುತ್ತಿಲ್ಲ. ಯೋಜನೆಗಳ ಜಾರಿಗೆ ಪೂರಕವಾಗುವಂತೆ ಈಗಾಗಲೇ ಭದ್ರ ಹುಲಿ ರಕ್ಷಿತಾರಣ್ಯ, ಕುದುರೆಮುಖ–ಸೋಮೇಶ್ವರ–ಮೂಕಾಂಬಿಕ ವನ್ಯಜೀವಿ ಅಭಯಾರಣ್ಯದ ಬಫರ್ ಜೋನ್‌ಗಳನ್ನು ಹತ್ತು ಕಿಲೋಮೀಟರ್‌ನಿಂದ ಒಂದು ಕಿಲೋಮೀಟರ್‌ಗೆ ಇಳಿಸಲಾಗಿದೆ.

ಕಸ್ತೂರಿ ರಂಗನ್ ವರದಿ ಜಾರಿಯಿಂದ ಮೇಲುನೋಟಕ್ಕೆ ಜನರಿಗೆ ಅಲ್ಲಲ್ಲಿ ತೊಂದರೆಯಾದಂತೆ ಕಂಡರೂ, ಅದು ಒಟ್ಟಿನಲ್ಲಿ ಜನರಿಗೆ ಅನುಕೂಲಕರವಾಗಿಯೇ ಇದೆ. ಸ್ಥಳೀಯರಿಗೂ ಕ್ಷೇಮ, ಒಟ್ಟು ಕನ್ನಡ ನಾಡಿಗೂ ಕ್ಷೇಮಕರ.

ಕೊಡಗಿನ ಪಶ್ಚಿಮಘಟ್ಟದಲ್ಲಿ ಕಾವೇರಿ ನದಿಮೂಲ ಪ್ರದೇಶದಲ್ಲಿ ಜಾರಿಯಾಗಲಿರುವ ಯೋಜನೆಗಳು. ಎಲ್ಲ ಯೋಜನೆಗಳಿಗಾಗಿ 6 ಲಕ್ಷಕ್ಕೂ ಹೆಚ್ಚು ಬಲಿತ ಪಾರಂಪಾರಿಕ ಮರಗಳು ನಾಶವಾಗಲಿವೆ.

ಪಶ್ಚಿಮ ಘಟ್ಟ ಪ್ರದೇಶದಲ್ಲಿನ ರಸ್ತೆ ಯೋಜನೆಗಳು ಹೀಗಿವೆ: ಮೈಸೂರು–ಕುಶಾಲನಗರ–ಮಡಿಕೇರಿ, ಮೈಸೂರು–ಮಡಿಕೇರಿ–ಸಂಪಾಜೆ–ಮಂಗಳೂರು, ತಲಶ್ಶೇರಿ (ಕೇರಳ)–ಗೋಣಿಕೊಪ್ಪ–ಮೈಸೂರು, ಮಡಿಕೇರಿ–ವಿರಾಜಪೇಟೆ–ಕಣ್ಣೂರ್ (ಕೇರಳ), ಪಣತೂರ್ (ಕೇರಳ)–ಭಾಗಮಂಡಲ–ಮಡಿಕೇರಿ–ಮೈಸೂರು. ಇವುಗಳ ಜೊತೆಗೆ, ಮೈಸೂರು–ಕುಶಾಲನಗರ–ಮಡಿಕೇರಿ ರೈಲ್ವೆ ಯೋಜನೆಯೂ ಸೇರಿಕೊಳ್ಳುತ್ತದೆ.

ಮೇಲಿನ ಯೋಜನೆಗಳಿಂದಾಗಿ ಕೊಡಗು ಮತ್ತು ಮಡಿಕೇರಿ ಭಾಗಗಳಲ್ಲಿ ಅಪರಿಮಿತ ಪರಿಸರ ನಾಶವಾಗುವುದಲ್ಲದೆ, ಗುಡ್ಡಕುಸಿತಗಳು ಸಂಭವಿಸಲಿವೆ. ಮಾನವ ನಿರ್ಮಿತ ನೈಸರ್ಗಿಕ ವಿಕೋಪಗಳನ್ನು ತಡೆಯುವ ಸಲುವಾಗಿ ಅಲ್ಲಿನ ಪರಿಸರ ಮಿತ್ರರು ಈ ಎಲ್ಲಾ ಯೋಜನೆಗಳ ರದ್ದತಿಗಾಗಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

**-ಸಹದೇವ್**
ಪರಿಸರ ಹೋರಾಟಗಾರ



ಕಾಡೆಂದರೆ ಅದರ ಒಳಗೂ ಹೊರಗೂ ನಿಸರ್ಗದೊಂದಿಗೆ ಸಹಜೀವನ ನಡೆಸುತ್ತಿರುವ ಜೀವಿಗಳೂ ಹೌದು.

ನೇತೃತ್ವದ ಸಮಿತಿಯು 56,825 ಚದರ ಕಿ.ಮೀ. ಪ್ರದೇಶವನ್ನು ರಕ್ಷಿಸುವಂತೆ ಶಿಫಾರಸು ಮಾಡಿದ ವರದಿಯನ್ನು 2013ರಲ್ಲಿ ಸಲ್ಲಿಸಿದೆ. ಪಶ್ಚಿಮ ಘಟ್ಟ ಸಾಲುಗಳು ಹಬ್ಬಿರುವ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗೆ ಎರಡೂ ವರದಿಗಳು ಪಥ್ಯವಾಗಿಲ್ಲ. ಈ ವ್ಯಾಪ್ತಿಯನ್ನು 50,805 ಚದರ ಕಿ.ಮೀ.ಗೆ ಇಳಿಸಬೇಕು ಎಂಬುದು ಈ ರಾಜ್ಯಗಳ ಆಗ್ರಹ. ಪರಿಸರಸೂಕ್ಷ್ಮ ವಲಯದಿಂದ 2,570.88 ಚದರ ಕಿ.ಮೀ. ವಿನಾಯಿತಿಯನ್ನು ಮಹಾರಾಷ್ಟ್ರ ಕೋರಿದೆ. ಕೇರಳ 1,337.24 ಚದರ ಕಿ.ಮೀ., ಕರ್ನಾಟಕ 1,571 ಚದರ ಕಿ.ಮೀ., ಗೋವಾ 754 ಚದರ ಕಿ.ಮೀ., ಗುಜರಾತ್ 129 ಚದರ ಕಿ.ಮೀ. ಹಾಗೂ ತಮಿಳುನಾಡು 24.53 ಚದರ ಕಿ.ಮೀ. ವಿನಾಯಿತಿಯನ್ನು ಕೋರಿವೆ.

ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿ ಕುಗ್ಗಿಸುವ ಆಗ್ರಹ, ಚೌಕಾಸಿ, ಚರ್ಚೆಗಳು ಕಳೆದ ಎಂಟು ವರ್ಷಗಳಿಂದ ನಡೆಯುತ್ತಲೇ ಇದ್ದು, ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶಗಳಿಗೆ ಅನ್ವಯಿಸಿ ಅಧಿಸೂಚನೆಯನ್ನು ಅಂತಿಮಗೊಳಿಸಲು 2021ರ ಡಿಸೆಂಬರ್ 31ರ ಗಡುವನ್ನು 'ರಾಷ್ಟ್ರೀಯ ಹಸಿರುಪೀಠ' ನೀಡಿತ್ತು. ಅಧಿಸೂಚನೆಯನ್ನು ಅಂತಿಮಗೊಳಿಸುವಲ್ಲಿ ಅನಗತ್ಯ ವಿಳಂಬವಾಗುತ್ತಿದೆ ಎಂದು 'ಗೋವಾ ಫೌಂಡೇಷನ್' ಹಸಿರು ಪೀಠಕ್ಕೆ ಅರ್ಜಿ ಸಲ್ಲಿಸಿತ್ತು. ಆದರೆ ಇದೀಗ ಗಡುವನ್ನು ಇನ್ನೂ ಆರು ತಿಂಗಳ ಕಾಲ ವಿಸ್ತರಿಸಲಾಗಿದೆ.

ಇಷ್ಟಕ್ಕೂ ವಾದ ಪ್ರತಿವಾದಗಳಿಗೆ ಅಂಟಿಕೊಂಡು ಪಶ್ಚಿಮ ಘಟ್ಟದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮುಂದುವರೆಸಿದರೆ ಏನಾಗಬಹುದು ಎಂಬುದಕ್ಕೆ ಅನೇಕ ಉದಾಹರಣೆಗಳು ಇತ್ತೀಚೆಗೆ ಗೋಚರಿಸಿವೆ. ಪ್ರಾಕೃತಿಕ ಅಸಮತೋಲನದ ಪ್ರತಿಕ್ರಿಯೆಗಳು ಸರಳವಾಗಿ ಅಥವಾ ಪರೋಕ್ಷವಾಗಿಯೇನೂ ಇರುವುದಿಲ್ಲ. ಇಡೀ ಬೆಟ್ಟವೇ ಕರಗಿ ಮಣ್ಣಿನ ಪ್ರವಾಹವಾಗಿ ಹರಿದು ಹೋಗುವುದನ್ನು ಕಣ್ಣಾರೆ ಕಂಡಿದ್ದೇವೆ. ಇನ್ನು ಸ್ಥಳೀಯರ ಬೆಳೆಗಳಲ್ಲಿ ವ್ಯತ್ಯಾಸ, ಬೇಸಿಗೆ, ಮಳೆ ಚಳಿಗಾಲದ ಅವಧಿಯಲ್ಲಿ ಬದಲಾವಣೆಗಳು ಮನುಷ್ಯನ ಅಸ್ತಿತ್ವಕ್ಕೇ ಸಂಚಕಾರ ತಂದಿವೆ. ಆದ್ದರಿಂದ, ಈ ಅಭಿವೃದ್ಧಿ ಕಾಮಗಾರಿಯನ್ನು ಸೀಮಿತವಾಗಿ ಕೈಗೊಳ್ಳುವುದು, ಪರಿಸರ ಪರವಾದ ನಿಲುವುಗಳನ್ನು ತೆಗೆದುಕೊಳ್ಳುವುದು ಅತ್ಯಂತ ತುರ್ತಿನ ಕೆಲಸವಾಗಿದೆ.

ನಾವು ತೆಗೆದುಕೊಳ್ಳುತ್ತಿರುವ ನಿರ್ಧಾರಗಳು ನೇರವಾಗಿ ನಮ್ಮ ಮಕ್ಕಳ ಮೇಲೆ ಪ್ರಭಾವ ಬೀರುತ್ತವೆ. ಮುಂದಿನ ತಲೆಮಾರುಗಳು ಕೇವಲ ಪ್ರವಾಹಗಳನ್ನು ಎದುರಿಸುತ್ತ, ಕುಸಿಯುವ ಬೆಟ್ಟಗಳಡಿಯಲ್ಲಿ ಸಿಲುಕುತ್ತ, ಉಸಿರಾಡಲು ಜೀವವಾಯುವಿಗಾಗಿ ಹಪಹಪಿಸುತ್ತ, ಕುಡಿಯುವ ನೀರಿಗಾಗಿ ಬಾಯಾರುತ್ತಾ ಜೀವನವನ್ನು ಕಳೆಯಬೇಕೇ? ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ವಿವೇಕವೇ ಪಶ್ಚಿಮಘಟ್ಟ ಸಂರಕ್ಷಣೆಯ ದಾರಿ ತೋರೀತು.

ಪರಿಸರ ಸಂರಕ್ಷಣೆಯ ಪ್ರಯತ್ನಕ್ಕೆ ಮತ್ತೊಂದು ಆತಂಕವಾಗಿ ಮೇಕೆದಾಟು ಪರಿಸರದಲ್ಲಿ ಜಲಾಶಯ ಕಟ್ಟುವ ಕರ್ನಾಟಕ ಸರ್ಕಾರದ ಉದ್ದೇಶಿತ ಯೋಜನೆ ಸೇರ್ಪಡೆಯಾಗಿದೆ. ಇರುವ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದಕ್ಕಿಂತಲೂ ಹೊಸ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುವುದು ಈ ಕಾಲದ ಲಕ್ಷಣವೇನೊ?

wಪ್ರತಿಕ್ರಿಯಿಸಿ: feedback@sudha.co.in